**ದಿ: 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎ ಕೆ ವಕೀಲರಿಂದ:**

1. ನಾನು ಪದವಿ ಪೂರ್ವ ಕಾಲೇಜಿನವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನ್ಯಾಯಾಲಯಕ್ಕೆ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ವಾದಿ ನಂಬರ್ 1 ರಿಂದ 3 ರವರು ಪ್ರತಿವಾದಿ ನಂಬರ್ 1 ರಿಂದ 3 ರವರ ವಿರುದ್ದ ಸಲ್ಲಿಸಿರುತ್ತಾರೆ. ಜಮೀನು ತಿಮ್ಮಪ್ಪಯ್ಯರವರಿಂದ ಖರೀದಿ ಮಾಡಿದ್ದೀವಿ ಎಂದು ದಾವೆ ಸಲ್ಲಿಸಿರುತ್ತಾರೆ. ವಾದಿಯ ವಂಶಾವಳಿಯ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿ ನಂಬರ್ 1 ರವರ ತಾತಾನ ಹೆಸರು ವೆಂಕಟಪ್ಪ ಪರಪ್ಪ ಆಗಿರುತ್ತದೆ. ಅವರು 04 ಜನ ಸಹೋದರರು ಇದ್ದರು ಅವರ ಹೆಸರುಗಳು ನನಗೆ ಈಗ ನೆನಪಿರುವುದಿಲ್ಲ. ವೆಂಕಟಪ್ಪಯ್ಯ ನವರಿಗೆ ತಿಮ್ಮಪ್ಪಯ್ಯನವರು ಒಬ್ಬರೆ ಮಗನಿರುತ್ತಾರೆ. 1ನೇ ಪ್ರತಿವಾದಿ ವೆಂಕಟಪ್ಪಯ್ಯನವರಿಗೆ 3 ಜನ ಮಕ್ಕಳಿರುತ್ತಾರೆ ಅವರ ಹೆಸರು ಗಿರಿಧರ, ಸೌಮ್ಯ ಮತ್ತು ಶ್ರೀ ಹರಿ.

2. ದಾವಾ ಜಮೀನು ದೇವದುರ್ಗ ಸೀಮಾಂತರದ ಸರ್ವೆ ನಂಬರ್ 435/3/1, ವಿಸ್ತೀರ್ಣ 01 ಎಕರೆ 08 ಗುಂಟೆ ಇದ್ದು ಇದರಲ್ಲಿ 02 ಗುಂಟೆ ಪೋಟ ಖರಾಬ ಹೋಗಿ 01 ಎಕರೆ 06 ಗುಂಟೆ ಉಳಿದಿರುತ್ತದೆ. ದಾವಾ ಜಮೀನಿನ ಚಕ್‌ಬಂದಿ ಪೂರ್ವಕ್ಕೆ - ಮಲ್ಲಪ್ಪ ಇವರ ಇವರ ಹೊಲ, ಪಶ್ಚಿಮಕ್ಕೆ ಗೊಟ್ರೆಯ್ಯ ಇವರ ಹೊಲ, ಉತ್ತರಕ್ಕೆ ನಾಗರಾಜ ಸಜ್ಜನ ಅವರ ಹೊಲ ಮತ್ತು ದಕ್ಷಿಣಕ್ಕೆ ಹನುಮಂತ್ರಯಾ ಇವರ ಹೊಲ. ದಾವಾ ಜಮೀನು ಮೊದಲು ವೆಂಕಟಪ್ಪಯ್ಯನವರ ಹೆಸರಿನಲ್ಲಿತ್ತು. ನಂತರ ಅವರ ಮಗ ತಿಮ್ಮಪ್ಪಯ್ಯನವರಿಗೆ ಆಗಿರುತ್ತದೆ. ಯಾವ ವರ್ಷದಲ್ಲಿ ಅವರ ಹೆಸರಿಗೆ ಜಮೀನು ಆಗಿರುತ್ತದ ಎಂದು ನನಗೆ ನೆನಪಿಲ್ಲ.

ಮುಂದುವರಿದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ